ಶ್ರೀ ಎಂ. ವೀರಪ್ಪ ಮೊಯಿಲಿ :- ಸನ್ಮಾನ್ಯ ಉಪಾಧ್ಯಕ್ಷಣೆಯರೆ, ಮಾನ್ಯ ಸದಸ್ಯರು ಭದ್ರಾವತಿ ಕಾಗದದ ಕಾರ್ಖಾನೆಯ ಬಗ್ಗೆ ಪ್ರಸ್ತಾಪವನ್ನು ಎತ್ತಿದ್ದಾರೆ ಅದನ್ನು ಮಾನ್ಯ ಸಚಿವರಿಗೆ ತಿಳಿಸಿ ಏನು ಮಾಡಬೇಕೊ ಆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಕರಿಯಣ್ಣ :- ಉಪಾಧ್ಯಕ್ಷಣೆಯವರೆ ಅವರು ಮಂತ್ರಿಗಳಿಗೆ ಹೇಳುತ್ತೇವೆ ಅವರು ಏನು ಕ್ರಮತೆಗೆದುಕೊಳ್ಳುತ್ತಾರೋ ಅದನ್ನು ತೆಗೆದುಕೊಳ್ಳುತ್ತಾರೆಂದು ಹೇಳಿದರು. ಆದರೆ ನಮಗೆ ಸರ್ಕಾರದಿಂದ ಗ್ಯಾರಂಟಿಯಾದ ಉತ್ತರ ಸಿಗಲಿಲ್ಲ, ದಯಮಾಡಿ ಆ 33 ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷಣೆಯವರು :- ನೀವು ಯಾವುದೋ ಒಂದನ್ನು ಎತ್ತಿದಾಕ್ಷಣ ಅವರು ಉತ್ತರವನ್ನು ಹೇಗೆ ಕೊಡುತ್ತಾರೆ ಅದನ್ನು ಅವರು ಪರಿಶೀಲನೆ ಮಾಡುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ :- ಉಪಾಧ್ಯಕ್ಷಣೆಯವರೆ ಅವರ ಉತ್ತರವನ್ನು ನಾವು ಒಪ್ಪಿಕೊಳ್ಳುತ್ತೇವೆ ಆದರೆ ಇದರ ಬಗ್ಗೆ ಮಂತ್ರಿಗಳು ಹೇಳಿಕೆಯನ್ನು ಕೊಡಬೇಕು.

(ಗೊಂದಲ)

ಉಪಾಧ್ಯಕ್ಷಣೆಯವರು :- ಅವರು ಅದನ್ನು ಪರಿಶೀಲನೆ ಮಾಡುತ್ತಾರೆ.

(ಗೊಂದಲ)

ದಿ. 11.3.92 ರಂದು ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಸಿಬ್ಬಂದಿ ನೌಕರರ ಒಕ್ಕೂಟ ಸಮಿತಿಯವರು ನಗರದ ವಾಹನಗಳನ್ನು ಸ್ಥಗಿತಗೊಳಿಸುವ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವ ಬಗ್ಗೆ .

ಶ್ರೀ ಚಿಕ್ಕಮಾದು :- ಉಪಾಧ್ಯಕ್ಷಣೆಯವರೇ ನಾಳೆ ಅಂದರೆ 11.3.1992 ರಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿ ನೌಕರರ ಒಕ್ಕೂಟ ಸಮಿತಿಯವರು ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 12 ಗಂಟೆಯವರೆಗೆ ನಗರದ ವಾಹನಗಳನ್ನು ಸ್ಥಗಿತಗೊಳಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಇದು ಸರ್ಕಾರದ ಗಮನಕ್ಕೆ ಬಂದಿದೆಯೆ? ಬೆಂಗಳೂರಿನಲ್ಲಿರತಕ್ಕ ಸುಮಾರು 40–50 ಲಕ್ಷ ಜನರಿಗೆ ಈ ರೀತಿ ನಗರ ಸಾರಿಗೆ ಸಂಸ್ಥೆಯವರು ವಾಹನಗಳನ್ನು ಸ್ಥಗಿತಗೊಳಿಸಿದರೆ ಎಷ್ಟು ಜನರಿಗೆ ತೊಂದರೆಯಾಗುತ್ತದೆ? ಅದಕ್ಕೊಸ್ಕರ ಇಂಥ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದರೆ ಸರ್ಕಾರ ಏನು ಕ್ರಮತೆಗೆದುಕೊಂಡಿದೆ ಎಂಬುದನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ :- ಉಪಾಧ್ಯಕ್ಷರೇ, ಈ ವಿಚಾರವು ಮಾನ್ಯ ಸಾರಿಗೆ ಸಚಿವರ ಗಮನಕ್ಕೆ ಬಂದಿದೆ, ಈಗಾಗಲೇ ಅವರು ಒಂದು ಹೇಳಿಕೆಯನ್ನು ಕೂಡ ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಅದು ಸಾರಿಗೆ ಸಚಿವರ ಗಮನಕ್ಕೆ ಬಂದಿರುವುದರಿಂದ ಈ ಬಗ್ಗೆ ಏನು ಕ್ರಮತೆಗೆದುಕೊಳ್ಳಬೇಕೋ ಅದನ್ನು ಅವರು ತೆಗೆದುಕೊಳ್ಳುತ್ತಾರೆ.

ದಿ. 07.03.92 ರುದು ಸುಳ್ಯ ಶಾಸಕರಾದ ಶ್ರೀ ಕೆ. ಕುಶಾಲ ಅವರ ಮೇಲೆ ಮಾಡಿರುವ ಹಲ್ಲೆ.

ಶ್ರೀ ವಿ. ವಸಂತ ಸಾಲಿಯಾನ :- (ಕಾಪು) ಉಪಾಧ್ಯಕ್ಷಣೆಯರೆ, 7.3.92 ರಂದು ಸೂಳ್ಯ ತಾಲ್ಲೂಕಿನಲ್ಲಿ ಸೂಳ್ಯದ ಎಂ.ಎಲ್.ಎ.ರವರಾದ ಸನ್ಮಾನ್ಯ ಕುಶಾಲರವರು ಶಾಲಾ ಅಭಿವೃದ್ಧಿ ಸಮಿತಿಯಲ್ಲಿ ಭಾಗವಹಿಸಿದ್ದರು. ಆ ಸಮಯದಲ್ಲಿ ಸುಮಾರು 20–25 ಗೂಂಡಾಗಳು ಬಿ.ಜೆ.ಪಿ. ಕಾರ್ಯಕರ್ತರು ಬಂದು ಅವರ ಮೇಲೆ ಹಲ್ಲೆಯನ್ನು ನಡೆಸಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದರೆ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಗೃಹ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.